ತುಂಬಾನೇ ಗೌರವ ಕೊಡ್ತಿದ್ರು. ಮದುವೆ ಅಂತ ಬಂದಾಗ ಜಾತಿ ಹುಡುಕ್ಲಿಲ್ಲ; ಪ್ರೀತಿ ಹುಡುಕಿದ್ರು. ಪ್ರೇಮವಿವಾಹ ಆದರೂ ಇಬ್ಬರ ಮನೆಯಲ್ಲೂ ಒಪ್ಪಿಗೆ ಪಡೆದು, ಎರಡೂ ಮನೆಯ ಸಂಪ್ರದಾಯದ ಪ್ರಕಾರವೇ ಮದುವೆ ಆದ್ರು. ಯಾವತ್ತಿಗೂ ಅಸೂಯೆ ಪಟ್ಟವರಲ್ಲ. ಸಮಯ ಮತ್ತು ಸಂಯಮವನ್ನ ಕಳ್ಕೊಂಡವರಲ್ಲ. ಹೊಸ ನಿರ್ದೇಶಕರುಗಳ ಬೆನ್ನುತಟ್ಟಿ ಅವರುಗಳ ಜೊತೆ ಕೆಲಸ ಮಾಡಕ್ಕೆ ಇಷ್ಟಪಡುತ್ತಿದ್ದರು. ತಾನು ಹೀರೊ ಅನ್ನೋದು ಅವರ ತಲೆಯಲ್ಲಿ ಯಾವತ್ತಿಗೂ ಇರಲಿಲ್ಲ.

ಒಮ್ಮೆ ಗುಟ್ಟಳ್ಳಿಯಲ್ಲಿ 'ಖಾಕಿ' ಚಿತ್ರದ ಶೂಟಿಂಗ್ ನಡೆಯುತ್ತಿತ್ತು. ಆ ಸಿನಿಮಾಗೆ ಗುರುರಾಜ್ ದೇಸಾಯಿಯವರೊಂದಿಗೆ ಕೂಡಿ ನಾನೂ ಸಂಭಾಷಣೆ ಬರೆದಿದ್ದೆ. ಆ ಚಿತ್ರದ ಒಂದು ದೃಶ್ಯದಲ್ಲಿ ಛಾಯಾಸಿಂಗ್ ಚಿರುವನ್ನು ಕೇಳ್ತಾರೆ, 'ನಿಂದ್ ಯಾವಾಗೋ ಮದುವೆ?' ಅಂತ. ಆಗ ಚಿರು, 'ಹೆಣ್ಣು ಸಿಕ್ಕಿದ್ ತಕ್ಷಣ ಆಗೋದೇ' ಅಂತ ಹೇಳ್ತಾರೆ. ಅದಕ್ಕೆ ಛಾಯಾಸಿಂಗ್ ಪ್ರತಿಕ್ರಿಯೆ: 'ನಿನ್ನನ್ನ ಮದುವೆ ಆಗೋ ಹೆಣ್ಣು ಯಾವ ಸುಂದರನ ಮಗಳೋ, ಅದ್ಯಾವ್ ಮೇಘದಲ್ಲಿದಾಳೋ' ಅಂತ. ಚಿರು ಈ ಡೈಲಾಗ್ ಕೇಳಿ ತುಂಬಾ ಖುಷಿಯಾಗೋಗಿದ್ರು.

ಚಿರು ಅವರಿಗೆ ಆ್ಯಕ್ಷನ್ ಹೀರೊ ಇಮೇಜ್ ಇದ್ರೂ ಸದಾ ನಗುಮೊಗದಲ್ಲೇ ಇರ್ತಿದ್ರು. ತನ್ನ ಸ್ನೇಹಿತರನ್ನು ಮತ್ತು ಕಿರಿಯರನ್ನು ಅವರು ಪ್ರೀತಿಯಿಂದ 'ಮಗನೇ' ಅಂತ ಕರೀತಿದ್ರು. ಅವರ ಜೊತೆಗಿದ್ದವ್ರು ಯಾರೂ ಸಪ್ಪಗೆ ಇರೋ ಹಾಗಿಲ್ಲ. ಮಾತಾಡ್ತಾ ನಗ್ತಾ ಲವಲವಿಕೆಯಿಂದಾನೇ ಇರಬೇಕಿತ್ತು. ಯಾಕಂದ್ರೆ ಅವರೂ ಹಂಗೇ ಇರ್ತಿದ್ರು. ಚಿರು ಅವರಿಗೆ ಮನೆಯಲ್ಲಿ ಅಜ್ಜಿ ಅಂದ್ರೆ ತುಂಬಾ ಇಷ್ಟ. ದಿನಕ್ಕೆ ಮೂರ್ನಾಲ್ಕು ಸಲವಾದ್ರೂ ಫೋನ್ ಮಾಡಿ, 'ಏನ್ ಡಾರ್ಲಿಂಗ್, ಏನ್ ಮಾಡ್ತಿದ್ದೀಯಾ? ತಿಂಡಿ ಆಯ್ತಾ? ಊಟ ಆಯ್ತಾ?' ಅಂತ ಅಜ್ಜೀನ ವಿಚಾರಿಸ್ಕೊಳ್ತಿದ್ರು.

ಚಿರು ಭೋಜನಪ್ರಿಯರು. ಅದರಲ್ಲೂ ಮಾಂಸದೂಟ ಇರಲೇಬೇಕಿತ್ತು. ಮನೆಯಲ್ಲಿರಲಿ, ಶೂಟಿಂಗ್‌ನಲ್ಲಿರಲಿ; ಮಸಾಲೆ ವಾಸನೆ ಮೂಗಿಗೆ ಬಡಿಯುತ್ತಲೇ ಇರೋದು.

ಚಿರು ಅವರ ತಾತ ಶಕ್ತಿಪ್ರಸಾದ್ ಚಿತ್ರರಂಗಕ್ಕೆ ಬರೋಕ್ಕೂ ಮುಂಚೆ ಶಿಕ್ಷಕರಾಗಿದ್ದವ್ರು. ಅವರ ಮಕ್ಕಳಾದ ಕಿಶೋರ್ ಸರ್ಜಾ ನಿರ್ದೇಶಕನಾಗಿ ದೊಡ್ಡ ಹೆಸರು ಮಾಡಿದಂತಹ ವ್ಯಕ್ತಿ. ಅರ್ಜುನ್ ಸರ್ಜಾ ಬಗ್ಗೆ ಹೇಳೋ ಹಾಗೇ ಇಲ್ಲ. ಕನ್ನಡ, ತೆಲುಗು, ತಮಿಳು, ಹಿಂದಿ ಚಲನಚಿತ್ರರಂಗಗಳಲ್ಲಿ 'ಸರ್ಜಾ' ಅನ್ನೋ ಧ್ವಜ ನೆಟ್ಟಂತಹ ಪ್ರತಿಭಾನ್ವಿತ ನಟ ಅವರು. ಇಂತಹ ಸಿನಿ ಕುಟುಂಬದಿಂದ ಬಂದಂತಹ ಮೂರನೇ ತಲೆಮಾರು ಚಿರಂಜೀವಿ ಸರ್ಜಾ ಮತ್ತು ಧ್ರುವ ಸರ್ಜಾ ಸಹೋದರರು. ಇವರುಗಳಿಗೆ 'ಶಕ್ತಿ' ತಾತನಿಂದ, 'ಭಕ್ತಿ' ಆಂಜನೇಯನಿಂದ ಬಂದ ಬಳುವಳಿ ಅನ್ಸುತ್ತೆ.

ಕಾಲೇಜು ಮುಗಿಸಿದ ಕೂಡಲೇ ಸಿನಿಮಾ ಬಗ್ಗೆ ತಿಳ್ಕೋಬೇಕು ಅಂತ ತಮ್ಮ ಮಾಮ ಕಿಶೋರ್ ಸರ್ಜಾ ಸಿನಿಮಾದಲ್ಲಿ ಚಿರು ಅಸಿಸ್ಟೆಂಟ್ ಡೈರೆಕ್ಟರ್



ಚಿರಂಜೀವಿ ಸರ್ಜಾ ಜೊತೆ ಲೇಖಕ ಮಾಸ್ತಿ

ಆಗಿ ಕೆಲಸ ಮಾಡಿದ್ರು. ಅದೇ ಮಾಮನ ಡೈರೆಕ್ಷನ್‌ನಲ್ಲಿ ಖಡಕ್ ಬಾಡಿ ಮಾಡ್ಕೊಂಡು, ಸಿಕ್ಸ್ ಪ್ಯಾಕ್‌ನಲ್ಲಿ, ರಗ್ಗಡ್ ಹೀರೊ ಆಗಿ ಮಾಸ್ ಎಂಟ್ರಿ ಕೊಟ್ಟರು. ಅದೇ 'ವಾಯುಪುತ್ರ' ಸಿನಿಮಾ. ಜನ ಸಿನಿಮಾನ ಮನಸಾರೆ ಮೆಚ್ಚಿ, ಚಿರೂನ ಹೀರೊ ಆಗಿ ಒಪ್ಕೊಂಡು ರಿಸೀವ್ ಮಾಡಿಕೊಂಡರು.

ಮೊದ ಮೊದಲು ಇವರು ಮಾಡೋ ಸಿನಿಮಾಗಳ ಕತೆಗಳನ್ನ ಅರ್ಜುನ್ ಸರ್ಜಾ ಫೈನಲ್ ಮಾಡ್ತಿದ್ರು. ಯಾವಾಗ್ ಧ್ರುವ ಸರ್ಜಾ ಭರ್ಜರಿಯಾಗಿ ಎಂಟ್ರಿ ಕೊಟ್ರೋ, 'ಚಿರು ಸ್ಟ್ಯಾಂಡ್ ಆಗಿದಾನೆ' ಅಂತ ಸಿನಿಮಾ ಆಯ್ಕೆ ಜವಾಬ್ದಾರಿಯನ್ನ ಅವರಿಗೇ ಬಿಟ್ಟು, ಧ್ರುವ ಅವರನ್ನ ನಿಲ್ಲಿಸಬೇಕು ಅಂತ ಅವರ ಕಡೆ ಹೆಚ್ಚು ಗಮನ ಕೊಡಕ್ಕೆ ಶುರು ಮಾಡಿದ್ರು. ಅದಾದ ನಂತರ ಚಿರು ಇಂಡಸ್ಟ್ರಿಯಲ್ಲಿ ಒಂದರ ಹಿಂದೆ ಇನ್ನೊಂದು ಸಿನಿಮಾ ಮಾಡುತ್ತಲೇ ಹೋದರು.

ಅವರ ಒಳಗೆ ಹೀರೊ ಜೊತೆಗೆ ಒಂದು ಮುಗ್ಧ ಮಗು ಕೂಡ ಇತ್ತು. ನಿರ್ಮಾಪಕರು ಇವರನ್ನ ಹೆಂಗ್ ಒಪ್ಪಿಸಿ ಡೇಟ್ಸ್ ತಗೊಂತಿದ್ರು ಅಂದ್ರೆ, ಸೇಮ್ ಮಗೂನ ಒಪ್ಪಿಸಿಕೊಂಡು ಬಂದಂಗ್ ಬಂದ್ಬಿಡೋವ್ರು. ಹಾಕಿದ ದುಡ್ಡಿಗೆ ಮೋಸ ಇಲ್ಲ ಅಂತ ನಿರ್ಮಾಪಕರು ಇವರ ಸಿನಿಮಾಗಳನ್ನ ನಿರ್ಮಿಸಿ ಹಣ ಗಳಿಸುತ್ತಾ ಹೋದರು. ಆದರೆ ವೈಯುಕ್ತಿಕವಾಗಿ ಚಿರು ಅವರಿಗೆ ಮೋಸ ಆಯಿತು. ಇಷ್ಟಾದರೂ ಯಾರನ್ನೂ ದೂಷಿಸದ, ಯಾರನ್ನೂ ದ್ವೇಷಿಸದ, ಯಾರೊಬ್ಬರ ಜೊತೆಯೂ ಸ್ಪರ್ಧಿಸದ ಸದ್ಗುಣ ಅವರದ್ದಾಗಿತ್ತು. ಯಾರ ಬಗ್ಗೆಯೂ ನೆಗೆಟಿವ್ ಮಾತಾಡದ ಪಾಸಿಟಿವ್ ವ್ಯಕ್ತಿತ್ವ. ಶತ್ರುವನ್ನು ಸಹ ನಗುವಿನಿಂದಲೇ ಮಣಿಸೋ ತಾಕತ್ತು ಇವರಲ್ಲಿತ್ತು. ಗೆಳೆತನ ಇವರ ನಿಜವಾದ ಒಡೆತನ ಆಗಿತ್ತು.

ಚಿರು ಬಳಿ ಒಬ್ಬ ಡ್ರೈವರ್ ಹನ್ನೊಂದು ವರುಷದಿಂದ ಇದಾನೆ ಅಂದ್ರೆ ಅವರು ಇನ್ನೆಂತಹ ಸ್ನೇಹಜೀವಿ ಇರ್ಬೇಕು ಲೆಕ್ಕ ಹಾಕಿ. ಎರಡು ವರುಷದ ಹಿಂದೆ ನಟಿ ಮೇಘನಾ ರಾಜ್ ಜೊತೆ ವಿವಾಹ ಬಂಧನಕ್ಕೆ ಒಳಗಾದರು. 'ವಾಯುಪುತ್ರ'ದಿಂದ ಶುರುವಾಗಿ ಕೊನೆಯ 'ಶಿವಾರ್ಜುನ'ವರೆಗೆ ಇಪ್ಪತ್ತಕ್ಕೂ ಹೆಚ್ಚು ಸಿನಿಮಾಗಳಲ್ಲಿ ಹೀರೊ ಆಗಿ ನಟಿಸಿದ್ದಾರೆ. ಸದಾ ಬೇಡಿಕೆ ಉಳಿಸಿಕೊಂಡಂತಹ ಅವರು ನಟಿಸಬೇಕಾಗಿದ್ದ ಸಿನಿಮಾಗಳ ಉದ್ದನೆ ಪಟ್ಟಿಯೇ ಇದೆ. ಅನಿಲ್ ಮಂಡ್ಯರ 'ಕ್ಷತ್ರಿಯ', ಕಾಂತಾ ಕನ್ನಲ್ಲಿ ಅವರ 'ಅಶೋಕವನ', ಸಂತು ನಿರ್ದೇಶನದ 'ದೊಡ್ಡೋವ್ರು', ಬಿಡುಗಡೆಯಾಗಬೇಕಿರುವ ರಾಮ್ ನಾರಾಯಣ್ ನಿರ್ದೇಶನದ 'ರಾಜ ಮಾರ್ತಾಂಡ', ಇನ್ನೂ ಹೆಸರಿಡದ ಒಂದಷ್ಟು ಚಿತ್ರಗಳೂ ಸೇರಿವೆ.

ತುಂಬು ಕುಟುಂಬ, ಸಣ್ಣ ವಯಸ್ಸಲ್ಲೇ ನಾಯಕನ ಪಟ್ಟ, 'ಯುವ ಸಾಮ್ರಾಟ್' ಎಂಬ ಬಿರುದು, ಮನೆಯ ಒಳಗೇ ಸೂಪರ್‌ಸ್ಟಾರ್‌ಗಳು, ಮನೆಯ ಮುಂದೆ ಸಹಸ್ರಾರು ಅಭಿಮಾನಿಗಳು, ಆತ್ಮೀಯ ಸ್ನೇಹಿತರು, ಐಷಾರಾಮಿ ಕಾರುಗಳು, ಸ್ವಂತ ಮನೆ, ಹೇರಳವಾದ ಹಣ, ಆಸ್ತಿ ಅಂತಸ್ತು, ಮೆಚ್ಚಿನ ಮಡದಿ ಆಕೆಯ ಪ್ರೀತಿ – ಹೀಗೇ ಎಲ್ಲವನ್ನೂ ಕೊಟ್ಟ ದೇವರು ಆಯುಸ್ಸನ್ನು ಮಾತ್ರ ಕೊಡಲಿಲ್ಲ. ಮನೆಯಲ್ಲಿದ್ದ ಚಿರುಗೆ ತೀವ್ರ ಎದೆನೋವು ಕಾಣಿಸಿಕೊಂಡಿದೆ. ಮನೆಯವರು ತಕ್ಷಣ ಅವರನ್ನು ಕಾರಿನಲ್ಲಿ ಕೂರಿಸಿಕೊಂಡು ಆಸ್ಪತ್ರೆಯ ಕಡೆ ಹೊರಟಿದ್ದಾರೆ. ಡ್ರೈವರ್ ಶರವೇಗದಲ್ಲಿ ಕಾರು ಓಡಿಸುತ್ತಿದ್ದರೆ ಅವರ ಬಾಯಲ್ಲಿ ಬಂದಂತಹ ಮಾತು 'ಹುಷಾರು ಕಣ್ರೋ... ನಿಧಾನಕ್ಕೆ ಹೋಗ್ರಿ... ನನಗೇನೂ ಆಗಲ್ಲ'.

ಮನೆಯವರ, ಅಭಿಮಾನಿಗಳ, ಸ್ನೇಹಿತರ, ತನ್ನವಳ ಹೃದಯ ಗೆದ್ದ 'ಚಿರಂಜೀವಿ' ಎಂಬ ಯುವಸಾಮ್ರಾಟನ ಹೃದಯ ಅದೇಕೋ ತುಂಬಾ ಬೇಗ ಸೋಲೊಪ್ಪಿಕೊಂಡಿತು (ನಿಧನ: ಜೂನ್ 7). ಸುತ್ತಲೂ ಇದ್ದವರನ್ನು ಅಳಿಸಿ, ಎಂದಿಗೂ ಅಳಿಸಲಾಗದ ನಿಷ್ಕಲ್ಮಶ ನಗುವನ್ನು ಅವರೆಲ್ಲರ ಮನಸ್ಸುಗಳಲ್ಲಿ ಬಿಟ್ಟು ಹೋಗಿಯೇಬಿಟ್ಟರು. ■